**3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.**

**Spl. C. No. 23/2014** ಪಿಡಬ್ಲ್ಯೂ - 3

**ದಿನಾಂಕಃ 22.07.2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದ.**

ಸಿಸಿ 30/2013 ರ ಪ್ರಕರಣದಲ್ಲಿ 1 ನೇ ಆರೋಪಿ ಕಟ್ಟಿಕೊಂಡಿದ್ದ ಮನೆಯನ್ನು ಹಾಳು ಮಾಡಿದ್ದ ಬಗ್ಗೆ ನಾನು ಮತ್ತು ಫ್ರಾಸಾ.4 ರವರ ಮೇಲೆ ಪ್ರಕರಣ ದಾಖಲು ಮಾಡಿ ದೋಷಾರೋಪಣೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿ. ನಮ್ಮ ಊರಿಗೂ ಬಿ ಸಿ ಕಾವಲ್ ಗ್ರಾಮಕ್ಕೂ 18 ಕಿಮಿ ದೂರವಾಗುತ್ತದೆ ಎಂದರೆ ಸರಿ. ಪೊಲೀಸರು ನಮಗೆ ಲಿಖಿತವಾಗಿ ತಿಳುವಳಿಕೆ ನೀಡಿಲ್ಲ. ಚಂದ್ರಶೇಖರ್ ರವರು ನನ್ನು ಕರೆದುಕೊಂಡು ಹೋಗಿದ್ದರು. ನಾನು ಹೋಗಿ ನೋಡಿದಾಗ ಒಂದು ಪಾಳು ಮನೆ ಮತ್ತು ಒಂದು ವಾಸದ ಮನೆ ಇತ್ತು ಎಂದರೆ ಸರಿಯಲ್ಲ. ಅಲ್ಲಿ ಪಾಳು ಮನೆ ಇತ್ತು. ಪಾಳು ಕಿತ್ತು ಹಾಕಿದ ಕೇಸು ನಮ್ಮ ಮೇಲೆ ನಡೆಯುತ್ತಿದೆ ಎಂದರೆ ಸರಿಯಲ್ಲ. ನಾವು ಕಿತ್ತು ಹಾಕಿದ ಶೆಡ್ ನಲ್ಲಿ ಆರೋಪಿಗಳ ಕುಟುಂಬ ವಾಸ ಮಾಡುತ್ತಿತ್ತು ಎಂದರೆ ಸರಿಯಲ್ಲ. ಮದ್ಯಾಹ್ನ ನಾವು ಅಲ್ಲಿ ಗೆ ಹೋದಾಗ 2 ರಿಂದ 2.30 ಗಂಟೆ ಆಗಿತ್ತು. ನಾವು ಸ್ಥಳದಲ್ಲಿ ನಿಪಿ.2 ಕ್ಕೆ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. 2008 ರಲ್ಲಿ ತುರುವೆಕೆರೆ ಪೊಲೀಸರು ನನ್ನ ಮೇಲೆ 2 ಪ್ರಕರಣಗಳನ್ನು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ 1 ನೇ ಆರೋಪಿ ಸ್ಥಳ ಮಹಜರಿಗೆ ಸಾಕ್ಷಿ ಆಗಿದ್ದ ಕಾರಣ ನಾನು ಈ ಪ್ರಕರಣದಲ್ಲಿ ಸಾಕ್ಷಿ ಆಗಿದ್ದೇನೆ ಎಂದರೆ ಸರಿಯಲ್ಲ.

ನಾನು ಹೋಗಿದ್ದ ಜಮೀನಿನ ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ನಾನು ಕಾಯಿ ವ್ಯಾಪಾರ ಮಾಡುತ್ತೇನೆ ಎಂದರೆ ಸರಿ. ನಾನು ಮೂ ಮಾ.1 ನ್ನು ಠಾಣೆಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ರೋಟಿ ಕಡ್ಡಿ ರೈತರ ಮನೆಗಳಲ್ಲಿ ಇರುತ್ತದೆ ಎಂದರೆ ಸರಿ. ಮೂ ಮಾ .2 ನನ್ನ ಮನೆಯಿಂದ ಪೊಲಿಸೀರಿಗೆ ತಂದು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ

3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.